INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,47-56
Peer Reviewed Journal, Referred Journal

# ರಾಜಾರಾಮ್ ಮೋಹನ್‌ರಾಯರ ದೃಷ್ಟಿಯಲ್ಲಿ ಸತಿಸಹಗಮನ ಪದ್ಧತಿಯ ಖಂಡನೆ

ಡಾ.ಶಿವಶಂಕರ .ಎಸ್.[1]

ವಿಶ್ವಕ್ರಾಂತಿಕಾರರಲ್ಲಿ ತಾತ್ವಿಕ ಸಿದ್ಧಾಂತಕಾರರಲ್ಲಿ ಸಂತರಲ್ಲಿ ವಿಚಾರವಾದಿಗಳಲ್ಲಿ ಮಾನವತಾವಾದಿಗಳಲ್ಲಿ ಆಧ್ಯಾತ್ಮಿಕರಲ್ಲಿ ಸಾಮಾಜಿಕ ನೀತಿ ಪ್ರತಿಪಾದಕರಲ್ಲಿ ರಾಜಾರಾಮ್ ಮೋಹನ್‌ರಾಯ್ ಅಗ್ರಗಣ್ಯರು.ರಾಜಾರಾಮ್ ಮೋಹನ್‌ರಾಯ್‌ರವರು ನವಯುಗದ ನಿರ್ಮಾಪಕರು ಹಾಗೂ ಸಮಾಜ ಸುಧಾರಕರು.19ನೇ ಶತಮಾನದ ಧಾರ್ಮಿಕ ಮತ್ತು ಸಾಮಾಜಿಕ ಸಂಗ್ರಾಮದ ಮಹಾನ್ ಪುರುಷರು.ಪ್ರಪಂಚದ ವಿವಿಧ ಮತಗಳ ತುಲನಾತ್ಮಕ ಅಧ್ಯಯನ ಮುಖ್ಯವೆಂದು ತಿಳಿಸಿದರು.ಏಕೇಶ್ವರವಾದ ಅಂದರೆ ದೇವರು ಒಬ್ಬನೇ ಎನ್ನುವ ತತ್ವವನ್ನು ಪ್ರತಿಪಾದಿಸಿ ಅಂದಿನ ಬಹುದೇವತಾರಾಧನ ಪದ್ಧತಿಗೆ ಕಡಿವಾಣ ಹಾಕಿದರು. ಹಲವು ಗ್ರಂಥಗಳನ್ನು ಬರೆದು ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದವರು.

ಸಾಮಾನ್ಯ ಜನರಿಗೂ ವೇದಾಂತವು ತಲುಪುವಂತೆ ಹೋರಾಡಿ ಶ್ರಮಿಸಿ ಮೇಲು ಕೀಳು ಎಂಬ ಭಾವನೆಯನ್ನು ತೊಡೆದು ಹಾಕಿದರು.ಇವರು ಬ್ರಹ್ಮಸಮಾಜದ ಸಂಸ್ಥಾಪಕರು.ಭಾರತ ಮಾತೆಯ ಹೆಮ್ಮೆಯ ಸುಪುತ್ರರು.ಭಾರತದ ಭವ್ಯ ಪರಂಪರೆಯನ್ನು ನಾಗರಿಕತೆಯನ್ನು ಹಾಗೂ ಸಂಸ್ಕೃತಿಯನ್ನು ಮಾನವೀಯ ಮೌಲ್ಯಗಳನ್ನು ಉನ್ನತ ಶಿಖರಕ್ಕೇರಿಸಿದವರು.

ರಾಜಾರಾಮ್ ಮೋಹನರಾಯ್‌ರವರು ಬಂಗಾಳ ರಾಜ್ಯದ ಬರ್ದ್ವಾನ್ ಜಿಲ್ಲೆಯ ರಾಧಾನಗರ ಎಂಬ ಹಳ್ಳಿಯಲ್ಲಿ ರಮಾಕಾಂತ್‌ರಾಯ್ ಮತ್ತು ತಾರಿಣೀದೇವಿ ಎಂಬ ಆದರ್ಶ ದಂಪತಿಗಳಿಗೆ ಸುಪುತ್ರನಾಗಿ ದಿನಾಂಕ 22-05-1772ರಂದು ಜನ್ಮತಾಳದರು.ಸಮಾಜದಲ್ಲಿ ಯಾವುದೇ ಧರ್ಮ ಮತ್ತು ಸಂಸ್ಕೃತಿಯನ್ನು ಅವಲೋಕಿಸಿದಾಗ ಅನವಶ್ಯಕವಾದ ಪದ್ಧತಿಗಳು, ಆಚಾರಗಳು, ಸಂಪ್ರದಾಯಗಳು ಅದರಲ್ಲಿ ಬೆರೆತುಕೊಂಡಿರುವುದನ್ನು ಕಾಣಬಹುದು.ಇದಕ್ಕೆ ಹಿಂದೂ ಧರ್ಮ ಹೊರತಾದುದಲ್ಲ.

ಹಿಂದೂ ಧರ್ಮದಲ್ಲಿ ಬೇರೂರಿದ್ದ ನಿರರ್ಥಕ ಮೂಢಚಾರಪದ್ಧತಿಗಳು ಅವಹೇಳನಕರವಾಗಿದ್ದವು.ಅರ್ಥರಹಿತವಾದ ಶುಷ್ಕ ಸಂಪ್ರದಾಯಗಳು, ದೇವರ ಹೆಸರಿನಲ್ಲಿ ಧರ್ಮದ

1. ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನ ಸಗಂಗೋತ್ರಿ, ಮೈಸೂರು .

ಹೆಸರಿನಲ್ಲಿ ಉಪಾಸನೆಗೆ ಸಾಧಕವಲ್ಲದ ಹಿಂಸಾತ್ಮಕವಾದ ಮೂಢನಂಬಿಕೆಗಳು ಹಿಂದೂ ಧರ್ಮದಲ್ಲಿ ಅಡಗಿರುವುವು. ಅಸ್ಪೃಶ್ಯತೆ, ಬಲಿಪದ್ಧತಿ, ವಿಧವಾ ವಿವಾಹಕ್ಕೆ ನಿಷೇಧ, ಬಾಲ್ಯ ವಿವಾಹ ಖಂಡನೆ, ನರಬಲಿ, ಶಿಶುಹತ್ಯೆ, ಅನಕ್ಷರತೆ, ಬಡತನ, ಅನಿಷ್ಠ ಸಮಸ್ಯೆ, ಪವಾಡ, ದೇವದಾಸಿ ಪದ್ಧತಿ, ಪ್ರಾಣಿಬಲಿ, ಸತಿಸಹಗಮನ ಪದ್ಧತಿ ಇನ್ನೂ ಅನೇಕ ಅನಿಷ್ಠ ಸಮಸ್ಯೆಗಳನ್ನು ಹಿಂದೂ ಧರ್ಮದಿಂದ ಕಿತ್ತುಹಾಕಬೇಕೆಂದು ರಾಜಾರಾಮ್ ಮೋಹನ್‌ರಾಯ್‌ರವರು ಇಡೀ ತಮ್ಮ ಜೀವನವನ್ನೇ ಮುಡುಪಾಗಿಟ್ಟರು ರಾಜಾರಾಮ್ ಮೋಹನ್‌ರಾಯರ ದೃಷ್ಟಿಯಲ್ಲಿ ಸಾಮಾಜಿಕ ಪಿಡುಗುಗಳಲ್ಲಿ ಅತ್ಯಂತ ಕ್ರೂರ, ಹೀನ, ದುಷ್ಟ, ಕೆಟ್ಟ, ಅನಿಷ್ಟ, ಅಮಾನವೀಯ ಪದ್ಧತಿ ಎಂದರೆ ಸತಿಸಹಗಮನ ಪದ್ಧತಿ.

ಸತಿಸಹಗಮನ ಪದ್ಧತಿ ಎಂದರೆ 'ಮೃತ' ಪತಿಯೊಡನೆ ಅವನ ಸತಿ (ಹೆಂಡತಿ) ಚಿತೆ ಏರಿ ಅಗ್ನಿಗೆ ಆಹುತಿಯಾಗುವುದನ್ನು ಸತಿಸಹಗಮನ ಪದ್ಧತಿ ಎಂದು ಕರೆಯುವರು.ಸತಿಸಹಗಮನ ಪದ್ಧತಿಯು ಹಿಂದೆ ಹಿಂದೂ ಧರ್ಮದ ಸಂಪ್ರದಾಯದಲ್ಲಿ ರೂಢಿಯಲ್ಲಿದ್ದ ಅತ್ಯಂತ ಕ್ರೂರವಾದ ಆಚರಣೆಯಾಗಿತ್ತು.ಗಂಡ ಸತ್ತರೆ ಅವನ ಚಿತೆಯೊಂದಿಗೆ ಹೆಂಡತಿಯನ್ನು ಕಟ್ಟಿ ಜೀವಂತವಾಗಿ ಅವಳನ್ನು ದಹನ ಮಾಡುತ್ತಿದ್ದರು.ಸತಿಸಹಗಮನ ಪದ್ಧತಿಯು ಬಹಳ ಅಮಾನವೀಯವಾದುದ್ದು.ಕ್ರೌರ್ಯದಿಂದ ಕೂಡಿರುವಂಥಹದ್ದು.ಗಂಡ ಸತ್ತ ನಂತರ ವಿಧವೆಗೆ ಸ್ವರ್ಗ ಸಿಗುವುದಿಲ್ಲ ಎನ್ನುವ ಮೂಢನಂಬಿಕೆಯನ್ನು ಸಂಪ್ರದಾಯಸ್ಥರು ಹೇಳಿಕೊಂಡು ವಿಧವೆಯನ್ನು ಅವಳ ಗಂಡನ ಶವದ ಜೊತೆಗೆ ಜೀವಂತವಾಗಿ ಚಿತೆಗೇರಿಸುವ ಪದ್ಧತಿಯೇ 'ಸತಿಸಹಗಮನ ಪದ್ಧತಿ'.ಈ ರೀತಿ ಬಲಿದಾನ ಮಾಡುವುದರಿಂದ ವಿಧವೆಗೆ ಅವಳ ಗಂಡನ ಜೊತೆ ಸ್ವರ್ಗ ಲಭಿಸುವುದೆಂದು ಮತಾಂಧರು ಭಾವಿಸಿದರು.

ಅವಳು ತನ್ನ ಮಕ್ಕಳ ಜೊತೆ ಇನ್ನೂ ಬದುಕುವ ಆಸೆಯಿದ್ದು ಅದನ್ನು ತಿರಸ್ಕರಿಸಿದರೂ ಕೂಡ ಅದನ್ನು ಲೆಕ್ಕಿಸದೆ ಆಕೆಯನ್ನು ಒಂದು ಕ್ರೂರ ಪ್ರಾಣಿಯಂತೆ ಬಲವಂತವಾಗಿ ಮಾದಕ ವಸ್ತುಗಲ ಸೇವನೆಯನ್ನು ಮಾಡಿಸಿ ಸರ್ವ ಅಲಂಕಾರಗಳಿಂದ ಶೃಂಗರಿಸಿ ಆಕೆಯನ್ನು ಮೆರವಣಿಗೆ ಮಾಡಿ ಗಂಡನ ಶವದ ಜೊತೆ ಹಗ್ಗದಿಂದ ಗಟ್ಟಿಯಾಗಿ ಹುಲ್ಲಿನ ಹೊರೆಯನ್ನು ಬಿಗಿಯುವಂತೆ ಬಿಗಿದು ಚಿತೆಗೆ ಬೆಂಕಿಯನ್ನು ಇಡುತ್ತಿದ್ದರು. ಅವಳ ಆಕ್ರಂದನ ಕೇಳಿಸುತ್ತದೆಂದು ಅಲ್ಲಿ ಸೇರಿದವರೆಲ್ಲ ಜೋರಾಗಿ ಕಿರುಚಿಕೊಳ್ಳುವುದರ ಜೊತೆಗೆ ಜಾಗಟೆ, ತಮಟೆ, ಕೊಂಬು, ಶಂಖಗಳ ಶಬ್ದಗಳನ್ನು ಮಾಡುತ್ತಿದ್ದರು.ಇಂತಹ ಹೀನ ಕೃತ್ಯವನ್ನು ತಡೆಗಟ್ಟಲು ರಾಜಾರಾಮ್ ಮೋಹನ್‌ರಾಯ್‌ರವರು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟಿರುವುದನ್ನು ನಾವು ಇಂದೂ ಇತಿಹಾಸದ ಪುಟಗಳಲ್ಲಿ ನೋಡಬಹುದಾಗಿದೆ.

ಮೊಗಲ್ ಚಕ್ರವರ್ತಿಗಳ ಕಾಲದಲ್ಲಿ ಅಲ್ಲಲ್ಲಿ ಈ ಪದ್ಧತಿ ಆಚರಣೆಯಲ್ಲಿರುವುದು ಕಂಡುಬರುತ್ತಿತ್ತು.ಅಕ್ಬರ್ ಮತ್ತು ಈಸ್ಟ್ ಇಂಡಿಯಾ ಕಂಪನಿಯವರು ಈ ಅನಿಷ್ಟ ಪದ್ಧತಿಯನ್ನು

ನಿಲ್ಲಿಸಲು ಪ್ರಯತ್ನಪಟ್ಟು ವಿಫಲರಾಗಿದ್ದರು.1811ರಲ್ಲಿ ರಾಜಾರಾಮ್ ಮೋಹನ್‌ರಾಯರ ಕುಟುಂಬದಲ್ಲಿಯೇ ಒಂದು ಘನ ಭೀಕರವಾದ ಘಟನೆ ನಡೆಯಿತು.ಇವರ ಅಣ್ಣ ಜಗನ್ಮೋಹನನು ಮರಣ ಹೊಂದಿದನು.ಆತನ ಪತ್ನಿಯಾದ ಆಳಕಮಂಜರಿಯನ್ನು ಆಕೆಯ ಬಂಧುಗಳು ಸಹಗಮನವನ್ನಾಚರಿಸಬೇಕೆಂದು ಬಲಾತ್ಕರಿಸಿದರು.ರಾಜಾರಾಮ್ ಮೋಹನ್‌ರಾಯ್‌ರಿಗೆ ತಾಯಿಯ ಸ್ಥಾನದಲ್ಲಿದ್ದ ಅತ್ತಿಗೆಯನ್ನು ಇಷ್ಟ ಇಲ್ಲದಿದ್ದರೂ ಬಲತ್ಕಾರವಾಗಿ ಸಹಗಮನ ಮಾಡುವುದನ್ನು ರಾಜಾರಾಮ್ ಮೋಹನ್‌ರಾಯರು ವಿರೋಧಿಸಿದರು.ಆಕೆಯನ್ನು ಜೀವ ಸಹಿತ ಉಳಿಸಲು ರಾಜಾರಾಮ್ ಮೋಹನ್‌ರಾಯರು ಸ್ಮಶಾನದಲ್ಲೇ ಇದ್ದು ಎಷ್ಟೇ ಪ್ರಯತ್ನಪಟ್ಟರೂ ಸಫಲವಾಗದೇ ಹೋಯಿತು.ಅಂದು ಅಲ್ಲಿ ನಡೆದ ಅಮಾನುಷ ಘೋರ ಕೃತ್ಯವನ್ನು ಅವರು ತಮ್ಮ ಕಣ್ಣಾರೆ ನೋಡಿದ್ದರಿಂದ ಅವರ ಅಂತಃಕರಣ ಅತಿಯಾಗಿ ಪರಿತಪಿಸಿತು.ಮಾನವ ಕುಲಕ್ಕೆ ಅಲ್ಲದೆ ಭಾರತಮಾತೆಯ ಕೀರ್ತಿಗೂ ಕಳಂಕದಂತಿರುವ ವಿನಾಶಕಾರಿಯಾದ ಈ ಕ್ರೂರ ಪದ್ಧತಿಯನ್ನು ದೈವ ಕೃಪೆಯಿಂದ ನಿಲ್ಲಿಸುವುದಾಗಿ ಭೀಷ್ಮ ಸಂಕಲ್ಪ ಮಾಡಿದರು.ಸಂಕಲ್ಪ ಸಾಧನೆಗೆ ಕಂಕಣ ಬದ್ಧರಾಗಿ ಸಮಾಜದ ದುಷ್ಟ ಸಂಪ್ರದಾಯಕ್ಕೆ ಉಗ್ರ ಪ್ರತಿಭಟನೆ ತೋರಿಸುತ್ತಾ ಸಂಗ್ರಾಮಕ್ಕೆ ಸಿದ್ಧರಾದರು.

ಪ್ರಪಂಚದಲ್ಲಿ ತನ್ನ ಗಂಡ ಮತ್ತು ಮುದ್ದಿನ ಮಕ್ಕಳೊಂದಿಗೆ ಸುಖವಾಗಿ ತನ್ನ ಜೀವನವನ್ನು ಕಳೆಯಬೇಕೆಂದು ಕನಸ್ಸು ಕಾಣುತ್ತಿದ್ದ ಮಹಿಳೆಯರಿಗೆ ಕೆಲವು ವೇಳೆ ತನ್ನ ಗಂಡನ ಸಾವು ತಾನು ಕಾಣುತ್ತಿದ್ದ ಕನಸ್ಸು ನುಚ್ಚುನೂರಾಗುತ್ತಿವೆ. ಅಂದಿನ ಕಾಲದಲ್ಲಿ ಸ್ತ್ರೀಯನ್ನು ಗಂಡ ಸತ್ತ ನಂತರ ಜೀವಂತವಾಗಿ ಆ ಶವದ ಜೊತೆಯಲ್ಲಿಯೇ ಮೃತ್ಯುವಿನ ದವಡೆಗೆ ನೂಕುತ್ತಿದ್ದರು. ಫ್ರೆಂಚ್ ಯಾತ್ರಿಕ 'ಬರ್ನಿಯರ್' ಎಂಬುವನು ತನ್ನ ಪ್ರವಾಸದ ವೇಳೆಯಲ್ಲಿ ಕಂಡ ಸತಿಸಹಗಮನದ ಬಗ್ಗೆ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. "ಒಮ್ಮೆ ಉರಿಯುತ್ತಿರುವ ಜ್ವಾಲೆಗಳ ಬೆಂಕಿಯನ್ನು ಕಂಡು ಹೆದರಿ ಓಡಿಹೋಗುತ್ತಿದ್ದ ವಿಧವೆಯನ್ನು ಆಕೆಯ ಹತ್ತಿರದ ಬಂಧುಗಳೇ ಹಿಡಿದು ಚಿತೆಯ ಮೇಲೆ ಬಲವಂತವಾಗಿ ಒಗೆದುದನ್ನು ವಿವರಿಸಿದ್ದಾರೆ.ಮತ್ತೊಮ್ಮೆ ಲಾಹೋರ್‌ನಲ್ಲಿ ಹನ್ನೆರಡು ವರ್ಷಗಳು ತುಂಬಿರದ ಬೆಂಕಿಗೆ ಹೆದರಿ ಅಳುತ್ತಿದ್ದ ಬಾಲವಿಧವೆಯೊಬ್ಬಳನ್ನು ವಯಸ್ಸಾದ ಮುದುಕಿಯೊಬ್ಬಳು ಬಲವಂತವಾಗಿ ಚಿತೆಗೆ ತಳ್ಳುವುದನ್ನು ಬರ್ನಿಯರ್ ಬಹಳವಾಗಿ ವರ್ಣಿಸಿದ್ದಾರೆ."1

ಹಾಗೆಯೇ ಹದಿಮೂರನೆಯ ಶತಮಾನದಲ್ಲಿ ತಮಿಳು ಶಿಲಾಶಾಸನವೊಂದರಲ್ಲಿ "ಯಾರು ವಿಧವೆಯರನ್ನು ಕೈಕಾಲು ಕಟ್ಟಿ ಬೆಂಕಿಯಲ್ಲಿ ತಳ್ಳಿ ಕೊಲ್ಲುವುದಿಲ್ಲವೋ ಅವರಿಗೆ ತಮ್ಮ ಪತ್ನಿಯರನ್ನು ವೇಶ್ಯೆಯರನ್ನಾಗಿ ಮಾಡಿದ ಪಾಪ ತಟ್ಟುತ್ತದೆ ಎಂಬುದಾಗಿ ಉಲ್ಲೇಖಿಸಲಾಗಿದೆ"2. ಇದಲ್ಲದೆ ದಕ್ಷಿಣ ಮತ್ತು ಮಧ್ಯಭಾರತಗಳಲ್ಲಿ ಸತಿಪದ್ಧತಿಯು ನಡೆದಿರುವುದರಲ್ಲಿ ಅಲ್ಲಿ ದೊರೆಯುತ್ತಿರುವ ಶಿಲಾಶಾಸನಗಳು ಮತ್ತು ಮಹಾಸತಿ ಕಲ್ಲುಗಳು ಸಾಕ್ಷಿಯಾಗಿವೆ. ವೇದಗಳ ಕಾಲದಲ್ಲಿ ಸ್ತ್ರೀಯರ

ಸ್ಥಾನಮಾನಗಳು ಉತ್ಕೃಷ್ಟವಾಗಿತ್ತು.ಅವಳು ಪುರುಷನೊಡನೆ ಸರಿಸಮಾನವಾದ ಗೌರವ, ಸ್ಥಾನಮಾನಗಳನ್ನು ಹೊಂದಿದ್ದಳು.ಪುರುಷನೊಂದಿಗೆ ಸಮಾನ ಹಕ್ಕು ಹಾಗೂ ವಿಶೇಷ ಗೌರವಗಳಿಗೆ ಪಾತ್ರಳಾಗಿದ್ದು, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಜನೆಗೆ ಸಂಬಂಧಪಟ್ಟ ತರಬೇತಿ ಪಡೆಯಲು ಹಾಗೂ ಧಾರ್ಮಿಕ ಕೆಲಸಗಳಲ್ಲಿಯೂ ಸಮಾನವಾಗಿ ಪುರುಷನೊಂದಿಗೆ ಸ್ತ್ರೀಯು ಭಾಗವಹಿಸುತ್ತಿದ್ದಳು.ವೇದಗಳ ಕಾಲ ಮುಗಿದ ನಂತರ ಹಂತ ಹಂತವಾಗಿ ಸ್ತ್ರೀಯ ಸ್ಥಾನಮಾನಗಳು ಅದೋಗತಿಗೆ ಇಳಿಯುತ್ತ ಬಂದಿತು.

ಕಾಲಕ್ರಮೇಣ ಸ್ತ್ರೀಪುರಷರೆಂಬ ತಾರತಮ್ಯ ಧೋರಣೆಗಳು ಪ್ರಾರಂಭವಾಯಿತು.ಮಧ್ಯಯುಗದ ಬಹುತೇಕ ಭಾಗಗಳಲ್ಲಿ ಭಾರತದ ಸ್ತ್ರೀಯರ ಮೇಲೆ ಹಲವಾರು ರೀತಿಯ ದೌರ್ಜನ್ಯಗಳು ನಡೆದಿರುವುದನ್ನು ನಾವು ನೋಡಬಹುದು.ವೇದಗಳ ಕಾಲದಲ್ಲಿ ಸ್ತ್ರೀಯರು ಮನೆಯ ಹೊರಗೆ ಮತ್ತು ಒಳಗೆ ವಿಶೇಷವಾದ ಗೌರವ ಮರ್ಯಾದೆ ಹಾಗು ಮನ್ನಣೆಯನ್ನು ಪಡೆದಿದ್ದಳು. ವಿವಾಹವನ್ನು ಪವಿತ್ರ ಸಂಸ್ಕಾರವೆಂದು ತಿಳಿಯಲಾಗಿತ್ತು.ಸ್ತ್ರೀಯರಿಗೆ ಉಪನಯನವನ್ನು ಮಾಡುತ್ತಿದ್ದ ಕಾಲವೂ ಇತ್ತು.ಅದೂ ಅಲ್ಲದೆ ಮಹಿಳೆಯರಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಹೆಚ್ಚಿನ ರೀತಿಯಲ್ಲಿ ದೊರಕುತ್ತಿತ್ತು.ಅವರು ದೇವತಾಶಾಸ್ತ್ರ ಮತ್ತು ತತ್ವಶಾಸ್ತ್ರಗಳಲ್ಲಿ ಅತ್ಯುತ್ತಮವಾದ ಪಾಂಡಿತ್ಯವನ್ನು ಗಳಿಸಿದ್ದರು. ಮಧ್ಯಯುಗದ ಬಹುತೇಕ ಭಾಗಗಳಲ್ಲಿ ಭಾರತದ ಸ್ತ್ರೀಯರ ಮೇಲೆ ಹಲವಾರು ರೀತಿಯ ದೌರ್ಜನ್ಯಗಳು ನಡೆಯುವುದಕ್ಕೆ ಹನ್ನೆರಡನೆಯ ಶತಮಾನದಲ್ಲಿ ಮಹಮದ್ ಘೋರಿ ದಾಳಿ ಹಾಗೂ ಇತರರು ಭಾರತದ ಮೇಲೆ ನಡೆಸಿದ ದಾಳಿ ಹಾಗೂ ಇತರರು ಭಾರತದ ಮೇಲೆ ನಡೆಸಿದ ಹಲವಾರು ಯುದ್ಧಗಳ ಪರಿಣಾಮದಿಂದ ಈ ದೇಶದ ಮಹಿಳೆಯರ ಸ್ಥಾನ ಹಾಗೂ ಗೌರವಗಳು ಇಳಿಯುತ್ತಾ ಬಂದಿತು.

18ನೇ ಶತಮಾನದಲ್ಲಿ ಭಾರತದಲ್ಲಿ ಬ್ರಿಟೀಷರು ತಮ್ಮ ರಾಜ್ಯಸ್ಥಾಪನೆ ಮಾಡಿದ ನಂತರವೂ ಸತತವಾಗಿ ಅವರ ಸ್ಥಾನ ಮತ್ತು ಶೋಷಣೆ ಅಧಿಕವಾಗುತ್ತಾ ಬಂದಿತ್ತು.ಭಾರತದ ಸಮಗ್ರ ಪರಿಸ್ಥಿತಿಯನ್ನು ನೋಡಿದಾಗ ಸಾಮಾಜಿಕ ಮೌಲ್ಯಗಳು ಪತನಗೊಂಡು ಹಲವಾರು ದುಷ್ಟ ಸಂಪ್ರದಾಯಗಳು ತಲೆಯೆತ್ತಿದವು.ಅಂದಿನ ಭಾರತೀಯ ಸ್ತ್ರೀಯರ ಹಕ್ಕು ಹಾಗೂ ಗೌರವಗಳಿಗೆ ಹೇಳಲಾಗದ ತೊಂದರೆಗಳು ಅವರನ್ನು ಹಿಂಸಿಸುತ್ತಿದ್ದವು.ಸ್ತ್ರೀಯರೆಲ್ಲರೂ ಅವುಗಳ ಪ್ರಭಾವಕ್ಕೊಳಗಾಗಿ ಅನ್ಯಾಯ ಅಸಮಾನತೆ ಹಾಗೂ ತಾರತಮ್ಯಗಳಿಂದ ತುಂಬಿ ತುಳುಕುತ್ತಿತ್ತು.ಇಂತಹ ದುಷ್ಟ ಪದ್ಧತಿಯನ್ನು ಬೇರುಸಹಿತ ಕಿತ್ತುಹಾಕಲು ಪಣತೊಟ್ಟವರು ಎಂದರೆ ರಾಜಾರಾಮ್ ಮೋಹನ್‌ರಾಯರ್‌ರವರು.

ಈ ನೀಚ ಪದ್ಧತಿಯನ್ನು ನಿರ್ಮೂಲನೆಗೊಳಿಸಲು 1814ರಲ್ಲಿ ಕಲ್ಕತ್ತಾ ನಗರಕ್ಕೆ ಬರಬೇಕಾಯಿತು. ಮಹಾತ್ಮ ಗಾಂಧೀಜಿಯವರು ಎರಡನೆಯ ಚಕ್ರಗೋಷ್ಠಿಯಲ್ಲಿ ನಮ್ಮ ದೇಶದಲ್ಲಿ

ಅಸ್ಪೃಶ್ಯತೆ ಎಂಬ ಕಳಂಕ ವ್ಯಾಪಿಸಿರುವುದರಿಂದ ತಾವು ನಾಚಿಕೆಯಿಂದ 'ಜಗತ್ತಿನ ಮುಂದೆ ತಲೆತಗ್ಗಿಸಬೇಕಾಗಿದೆ ಎಂದು ಹೇಳದ ರೀತಿಯಲ್ಲಿಯೇ ರಾಜಾರಾಮ್ ಮೋಹನ್‌ರಾಯರಿಗೂ ಸಹಗಮನ ದುರಾಚಾರ ಪಿಶಾಚಿ ನಮ್ಮ ದೇಶದಲ್ಲಿ ವ್ಯಾಪಿಸಿರುವುದನ್ನು ಕಂಡು ಅವರ ಮನಸ್ಸು ತೀವ್ರಯಾತನೆಗೊಳದಾದುರಲ್ಲಿ ಆಶ್ಚರ್ಯವೇನಿದೆ? ಮಾನವ ವರ್ಗಕ್ಕೂ ದೇಶಕ್ಕೂ ಅಂಟಿದ ಈ ಕಳಂಕವನ್ನು ನಿವಾರಿಸುವುದಾದರೂ ಹೇಗೆ?ಎಂತಹ ಪ್ರಬಲ ಪ್ರಯತ್ನದಿಂದ ಈ ದುಷ್ಟ ಪದ್ಧತಿಯನ್ನು ನಿರ್ಮೂಲನೆಗೊಳಬಹುದು.'ಸಂಪ್ರದಾಯ ಶರಣರ ಪ್ರತಿಭಟನೆಯೊಂದು ಕಡೆ ಪ್ರಭುತ್ವದವರ ಔದಾಸೀನ ಮತ್ತೊಂದು ಕಡೆ' ಈ ಉಭಯ ವಿರೋಧಿಗಳ ಎದುರಾಳಯಾಗಿ ಏಕಾಂಗಿಯಾಗಿ ಹೋರಾಡಿದರು.ತಮ್ಮ ಮಿತ್ರರೊಂದಿಗೆ ರುದ್ರಭೂಮಿಗೆ ಹೋಗಿ ಆ ದುಷ್ಟ ಪದ್ಧತಿಯನ್ನು ನಿಲ್ಲಿಸಬೇಕೆಂದು ಮನಕರಗುವಂತೆ ಅಲ್ಲಿ ಸೇರಿದ್ದವರಿಗೆಲ್ಲಾ ತಾವೇ ಸ್ವತಃ ಬೋಧಿಸುತ್ತಿದ್ದರು. ಬಂಗಾಳ ಪ್ರಾಂತ್ಯದಲ್ಲಿಯೇ 1819ರಿಂದ 1826ರವರೆಗೆ ಸುಮಾರು 4748 ಸ್ತ್ರೀಯರನ್ನು ಸಜೀವವಾಗಿ ಸುಟ್ಟು ಭಷ್ಮ ಮಾಡಿರುವುದು ಸಮೀಕ್ಷೆಯೊಂದರಿಂದ ತಿಳದು ಬಂದಿದೆ.

ಕ್ರಿ.ಶ. 1822ರಲ್ಲಿ ರಾಜಾರಾಮ್ ಮೋಹನ್‌ರಾಯರು 'ಹಿಂದೂ ಲಾ' ಪ್ರಕಾರ ಆಸ್ತಿಯಲ್ಲಿ ಹೆಣ್ಣು ಮಕ್ಕಳಗೆ ಹಕ್ಕಿದೆ ಎಂದು ಆಧಾರಗಳನ್ನು ನೀಡಿದರು.ವಿಧವೆ ಜೀವನ ನಡೆಸಲು ಕೇವಲ ಮೂರೇ ಮಾರ್ಗಗಳದ್ದವು.

1) ಇಡೀ ಕುಟುಂಬದವರೆಲ್ಲರ ಸೇವೆ ಮಾಡಿಕೊಂಡು ಕಷ್ಟ ಮತ್ತು ಸಂಕಟಕರ ಜೀವನ ನಡೆಸುವುದು.
2) ಇದು ದುಸ್ಸಾಧ್ಯವಾದಾಗ ತನ್ನ ಜೀವನೋಪಾಯಕ್ಕಾಗಿ ಅಧರ್ಮ ಮಾರ್ಗಕ್ಕೆ ಕಾಲಿಟ್ಟು ಅನೀತಿ ಪರಳಾಗಿ ಬಾಳುವುದು.
3) ಗಂಡನ ಶವದೊಡನೆ ಚಿತೆಯನ್ನೇರಿ ಅಗ್ನಿಗೆ ಆಹುತಿಯಾಗಿ ಭಸ್ಮವಾಗುವುದು.

ಅತಿಯಾಗಿ ಪ್ರೀತಿಸುತ್ತಿದ್ದ ಪತಿಯನ್ನು ಆಕಸ್ಮಿಕವಾಗಿ ಮರಣ ಹೊಂದಿದಾಗ ಆತನನ್ನು ಬಿಟ್ಟು ಬದುಕಿರುವ ಶಕ್ತಿ ಆಕೆಗೆ ಇರುತ್ತಿರಲಿಲ್ಲ. ಆವಾಗ ಆಕೆ ತನ್ನ ಗಂಡನ ಚಿತೆ ಏರಿ ಸಾಯುತ್ತಿದ್ದಳು.ಇದನ್ನು ಮಧ್ಯಯುಗದ ಪುರೋಹಿತರು ಅದನ್ನೆ ಇಷ್ಟವಿಲ್ಲದ ಸತಿಯರನ್ನು ಬಲವಂತವಾಗಿ ಹಗ್ಗದಿಂದ ಕಟ್ಟಿ ಆಕೆಯ ಗಂಡನ ಚಿತೆಯ ಮೇಲೆ ಬೆಂಕಿಗೆ ತಳ್ಳಲು ಪ್ರಾರಂಭಿಸಿದರು ಎಂದು ಹೇಳುತ್ತಾರೆ.

ಸತಿಸಹಗಮನ ಪದ್ಧತಿಯು ಇದೊಂದು ಕ್ರೂರ ಅಮಾನುಷ ಪದ್ಧತಿಯಾಗಿದ್ದು ಹೃದಯ ವಿದ್ರಾವಕ ಪ್ರಸಂಗವಾಗಿದೆ.ಇದು ರುದ್ರಭೀಕರ ಘನಘೋರ ಹತ್ಯಾಕಾಂಡವೆಂದು ವಿವೇಕಾನಂದರು ಟೀಕಿಸುತ್ತಾರೆ.

"ಬಾಲ್ಯವಿವಾಹ ಮತ್ತು ಬಹುಪತ್ನಿತ್ವ ವ್ಯಾಪಕವಾಗಿ ಇದ್ದ ಆ ಕಾಲದಲ್ಲಿ ತೀರ ಚಿಕ್ಕವಯಸ್ಸಿನ ಹೆಣ್ಣು ಮಕ್ಕಳನ್ನು ಬಲವಂತವಾಗಿ ಗಂಡಸಿನ ಶವದೊಂದಿಗೆ ಬಿಗಿದು ಸುಟ್ಟು ಬಿಡುತ್ತಿದ್ದರು.ಮರಣ ಹೊಂದಿದ ಮನುಷ್ಯನಿಗೆ ನಾಲ್ವರು ಹೆಂಡತಿಯರಿದ್ದರೆ ಅವರೆಲ್ಲರ ಗತಿಯೂ ಸಾಲಾಗಿ ಸಹಗಮನ ಮಾಡುವುದೇ ಆಗಿತ್ತು."3

'4-12-1829'ರಂದು ಈ ಅಮಾನುಷ ಕೃತ್ಯ ಬ್ರಿಟಿಷ್ ಸರ್ಕಾರದವರಿಂದ ರದ್ದುಗೊಳಿಸಲ್ಪಟ್ಟಿತು.ಈ ಕಾನೂನಿನ ಪ್ರಕಾರ ಯಾರಾದರೂ ಇಂತಹ ನೀಚ ಕೆಲಸಕ್ಕೆ ಸಹಾಯ ಮಾಡಿದ್ದೇ ಆದರೆ ಅಂತಹವರು ಮರಣದಂಡನೆಗೆ ಗುರಿಯಾಗುವರು ಎಂದು ಘೋಷಿಸಲಾಗಿತ್ತು.ಈ ಅಮಾನುಷ ಕ್ರೂರ ಪದ್ಧತಿ ನಿವಾರಣೆಯಾಯಿತು.ಪ್ರಜೆಗಳಲ್ಲಿ ಆಚರಣೆಯಲ್ಲಿದ್ದ ಧರ್ಮ ಸ್ವಾತಂತ್ರ್ಯಕ್ಕೆ ಲೋಪಬಾರದಂತೆಯೂ ಸ್ತ್ರೀ ವರ್ಗಕ್ಕೆ ಅನುಕೂಲವಾಗುವಂತೆಯೂ ಒಮದು ಉಚಿತ ಮಧ್ಯಮ ಮಾರ್ಗವನ್ನು ಅನುಸರಿಸಿ ಸರ್ಕಾರದವರು ಸಾರ್ವಜನಿಕರ ಅಭಿಪ್ರಾಯಕ್ಕೆ ವಿರೋಧವಾಗದ ರೀತಿಯಲ್ಲಿ ಸಾವಧಾನವಾಗಿ ಕಾನೂನನ್ನು ಆಚರಣೆಯಲ್ಲಿ ತಂದರು.ಭಾರತದ ಕೀರ್ತಿಗೆ ಕಳಂಕಪ್ರಾಯವಾಗಿ ಧರ್ಮದ ಹೆಸರಿನಲ್ಲಿ ಆಚರಣೆಯಲ್ಲಿದ್ದ ಈ ದುಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮಹತ್ ಪ್ರಯತ್ನ ನಡೆಸಿದ ರಾಜಾರಾಮ್ ಮೋಹನ್‌ರಾಯರೊಡನೆ ಆಗಿನ ಕಾಲದ ದೇಶಭಕ್ತನೊಬ್ಬನೂ ಸಹಕರಿಸಲಿಲ್ಲ.

ಇವರ ಪ್ರಯತ್ನಕ್ಕೆ ಪ್ರಬಲವಾದ ವಿರೋಧ ಪಕ್ಷವೇ ಇದ್ದಿತು.ಪ್ರಚಂಡ ಸಭೆಗಳನ್ನು ಏರ್ಪಡಿಸಿ ರಾಜಾರಾಮ್ ಮೋಹನ್‌ರಾಯರಿಗೆ ವಿರೋಧವಾಗಿ ಕಾರ್ಯಕ್ರಮಗಳನ್ನು ಕೈಗೊಂಡರು.ಪತ್ರಿಕೆಗಳಲ್ಲಿ ವಿರೋಧವಾದ ಹೇಳಿಕೆಗಳನ್ನು ಪ್ರಕಟಿಸಿದರು.ಸರ್ಕಾರದಲ್ಲಿ ತಮ್ಮ ಆಗ್ರಹ ಪೂರ್ವಕ ಪ್ರತಿಭಟನೆಯನ್ನು ವ್ಯಕ್ತಗೊಳಿಸಿದರು.ಧರ್ಮದ ಹೆಸರಿನಲ್ಲಿ ಅಧರ್ಮ ಆಚರಣೆಯ ಪ್ರಚಾರ ನಡೆಸಿದರು.ಇಷ್ಟಲ್ಲದೆ ರಾಜಾರಾಮ್ ಮೋಹನ್‌ರಾಯರ ಪ್ರಾಣಹತ್ಯೆಗೂ ಪ್ರಯತ್ನಪಟ್ಟರು.ಧೈರ್ಯಶಾಲಿಯಾದ ಮೋಹನ್‌ರಾಯರು ಈ ಧರ್ಮ ಯುದ್ಧದಲ್ಲಿ ಸಮಸ್ತ ಪ್ರತಿಭಟನೆಗಳನ್ನು ನಿರ್ಭಯರಾಗಿ ಎದುರಿಸಿದರು.ಕೆಲವು ಪುರುಷ ವರ್ಗದಲ್ಲಿ ಕನಿಕರಭಾವನೆ ಮಾಯವಾಗಿ ಕ್ರೂರ ಸ್ವಭಾವ ಬೇರೂರಿದ್ದಿತು.ತಾತ್ಸಾರ ಭಾವನೆಯಿಂದ ಕೂಡಿದ್ದ ಸಮಾಜದಲ್ಲಿ ಜಾಗೃತಿಯನ್ನು ಉಂಟುಮಾಡುವುದು ಸುಲಭವಲ್ಲ. ಮಾನವ ಸಹಜ ಸ್ವಭಾವಕ್ಕೆ ವಿರೋಧವಾಗಿರುವ ಅತ್ಯಂತ ನೀಚ ಪದ್ಧತಿಯ ಆಚರಣೆಯನ್ನು ಸಹಿಸಲಾರದೆ ದೇಶದ ಉನ್ನತಿಯನ್ನೇ ಧ್ಯೇಯವಾಗಿಟ್ಟುಕೊಂಡು ಸತತವಾಗಿ ಸುಧಾರಣೆಗಾಗಿ ಶ್ರಮಿಸಿದರು.ಭಾರತ ಮಾತೆಯ ಅಮರ ಕೀರ್ತಿಗೆ ಕಳಂಕಪ್ರಾಯವಾಗಿದ್ದ ಈ ದುಷ್ಟ ಪದ್ಧತಿ ರದ್ದಾಯಿತು.ಸರ್ಕಾರದ ಸಹಗಮನ ನಿಷೇಧಾಜ್ಞೆಯು ಜಾರಿಯಾದ ನಂತರ ಸಂಪ್ರದಾಯ ಶರಣರೆಂದೆನಿಸಿಕೊಂಡಿದ್ದ ವಿರೋಧಿಗಳು ತಮ್ಮ ಮೂಢನಂಬಿಕೆಯ ಗೊಡ್ಡು ಸಂಪ್ರದಾಯದ

ಹೋರಾಟವನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ತಮ್ಮ ಹೋರಾಟವನ್ನು ಮತ್ತಷ್ಟು ಹೆಚ್ಚಿಸಿದರು.ಅಪಜಯದ ಅಪಮಾನ ಒಂದು ಕಡೆ ಮತ್ತು ಅಸೂಯೆ ಕ್ರೋಧಗಳು ಮತ್ತೊಂದು ಕಡೆ.ಸಂಪ್ರದಾಯ ಬದ್ಧರು ತಮ್ಮ ಹೋರಾಟವನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ರಾಕ್ಷಸಾವೇಶದಿಂದ ಅಮಾನವೀಯತೆಯಿಂದ ಅಧರ್ಮದವರಾಗಿದ್ದರು.

ಹಿಂದೂ ಧರ್ಮಕ್ಕೆ ಉಳಿಗಾಲವಿಲ್ಲವೆಂದು ಜನಸಾಮಾನ್ಯರನ್ನು ಹುರಿದುಂಬಿಸಿ ಸರ್ಕಾರಕ್ಕೆ ಪ್ರತಿಭಟನಾ ರೂಪವಾದ ಕೆಲವು ಮಂದಿಯ ಸಹಿಯುಳ್ಳ ಒಂದು ಮನವಿಯನ್ನು ಸಲ್ಲಿಸಿದರು.ಅಂದರೆ ಸತಿಸಹಗಮನ ಪದ್ಧತಿಯನ್ನು ಆಚರಿಸುತ್ತಿದ್ದ ಸಂಪ್ರದಾಯಸ್ಥರು ತಮ್ಮ ವಾದವೇ ಸರಿಯೆಂದು ಸಮರ್ಥಿಸಿಕೊಳ್ಳುತ್ತಿದ್ದರು.ಪ್ರಾಚೀನ ಕಾಲದಿಂದ ರೂಢಿಗೆ ಬಂದಿರುವ ಶಾಸ್ತ್ರಸಮ್ಮತವಾದ ಸಹಗಮನವನ್ನು ವಿರೋಧಿಸುವುದು ಸಮ್ಮತವಲ್ಲವೆಂದು ತಾವೊಂದು ಗುಂಪು ಸೇರಿಸಿಕೊಂಡು ವಿರುದ್ಧವಾಗಿ ಅಪಪ್ರಚಾರ ಮಾಡತೊಡಗಿದರು.ಸ್ವರ್ಗದ ಸುಖ ವಲಯದಲ್ಲಿ ತನ್ನ ಗಂಡನೊಂದಿಗೆ ಮೂರುವರೆ ಕೋಟಿ ವರ್ಷಗಳ ಕಾಲ ಸಂತೋಷವಾಗಿ ಇರುತ್ತಾಳೆಂದು ಸಹಗಮನ ಮಾಡುವ ಸ್ತ್ರೀಯು ತನ್ನ ತಂದೆ, ತಾಯಿ ಮತ್ತು ಪತಿ ಈ ಮೂರು ವಂಶಿಕರ ಎಲ್ಲಾ ಪಾಪಗಳನ್ನು ತೊಳೆಯುತ್ತಾಳೆ.ಮನುಷ್ಯ ಬ್ರಹ್ಮ ಹತ್ಯ ಮಾಡಿರಬಹುದು, ಉಪಕಾರಕ್ಕೆ ಅಪಕಾರ ಮಾಡಿರಬಹುದು ಅಥವಾ ಆಪ್ತ ಸ್ನೇಹಿತನನ್ನು ಕೊಂದಿರಬಹುದು ಈ ಎಲ್ಲಾ ಪಾಪಗಳು ಸತಿಯಿಂದ ನಿವಾರಣೆಯಾಗುತ್ತಿದೆ.ಮೃತನಾದ ಪತಿಯ ಚಿತೆಯನ್ನು ಏರುವುದಕ್ಕಿಂತ ಬೇರಾವ ಮಾರ್ಗವೂ ಶೀಲವಂತ ಸ್ತ್ರೀಗೆ ಇರುವುದಿಲ್ಲ. ತನ್ನ ಗಂಡ ಸತ್ತ ಮೇಲೆ ಆಕೆಗೆ ಮತ್ಯಾವ ಕರ್ತವ್ಯವೂ ಇರುವುದಿಲ್ಲವೆಂದು ಒಂದು ಮೂಢನಂಬಿಕೆ.ಈ ನಂಬಿಕೆಗೆ ಪುರೋಹಿತ ವರ್ಗ ಮತ್ತು ಮತಾಂಧರರು ಹಾಗೂ ಕೆಲ ಪಂಡಿತರುಗಳು ಪ್ರಬಲವಾದ ಪ್ರಚಾರವೇ ಕಾರಣ.ಇದಕ್ಕೆ ಸಂಬಂಧಿಸಿದಂತೆ ತಕ್ಕ ಶಾಸ್ತ್ರ ನಿಯಮಗಳನ್ನು ರಚಿಸಿ ಅರಿಯದ ಹೆಣ್ಣನ್ನು ಬಲಿಯನ್ನಾಗಿ ಅರ್ಪಿಸುತ್ತಿದ್ದರು.ಸಾವಿರಾರು ಸ್ತ್ರೀಯರು ಇಂತಹ ಅಪಪ್ರಚಾರವನ್ನು ಸತ್ಯವೆಂದು ನಂಬಿ ತಮ್ಮ ಪ್ರಾಣವನ್ನು ಅರ್ಪಿಸುತ್ತಿದ್ದರು.

ಮನು ಸ್ತ್ರೀಯರ ಬಗ್ಗೆ ತನ್ನ ಅಭಿಪ್ರಾಯವನ್ನು ಈ ರೀತಿ ಹೇಳುತ್ತಾನೆ. ಸ್ತ್ರೀಯರನ್ನು ಗೌರವಿಸದ ಯಾವ ಧರ್ಮಕಾರ್ಯವೂ ಫಲಕಾರಿಯಾಗುವುದಿಲ್ಲ ಎಂದು ಸ್ತ್ರೀಯರನ್ನು ನೋಯಿಸುವುದರಿಂದ ಮತ್ತು ಮನೆಯ ಸೊಸೆಯ ಗೋಳು ಹುಯ್ದುಕೊಂಡು ತಳಮಳಗುಟ್ಟಿಸುವುದರಿಂದ ಮನೆಯೇ ಹಾಳಾಗುತ್ತದೆ ಎಂದಿದ್ದಾರೆ.

ಸ್ತ್ರೀ ಮನೆಯ ಮಂಗಳ ದೇವತೆ.ಪತಿಗೆ ಮತ್ತು ಮನೆಗೆ ಸಂಬಂಧಪಟ್ಟ ಪ್ರತಿಯೊಂದು ಸಂದರ್ಭದಲ್ಲಿಯೂ ನೆರವಾಗಿ ತನ್ನ ಪತಿ, ಮಕ್ಕಳ ಯೋಗಕ್ಷೇಮವೇ ತನ್ನ ಜೀವನದ ಧ್ಯೇಯವೆಂದು ತಿಳಿದು ಅವಿಶ್ರಾಂತಿ ದುಡಿಯುವ ಬಾಳ್ವೆ ಸದ್ಗುಣಗಳ ಪ್ರದರ್ಶನಕ್ಕೆ

ನಿದರ್ಶನವಲ್ಲವೆ?ಗೃಹಲಕ್ಷ್ಮಿಯಾಗಿದ್ದರೂ ದಾಸಿಯಂತೆ ದುಡಿದು ತನ್ನ ಇಡೀ ಜೀವನವನ್ನೇ ಇತರರ ಸುಖಸಂಪತ್ತುಗಳಿಗಾಗಿ ತ್ಯಾಗ ಮಾಡುವುದು ಒಂದು ಉದಾತ್ತ ಲಕ್ಷಣವಲ್ಲವೇ? ಮನೆಯೇ ಗುಡಿಯಮ್ಮ ಪತಿಯೇ ದೇವರಮ್ಮ ಎಂದು ತಿಳಿದು ಪತಿದೇವರಿಗೆ ಪ್ರತಿಯೊಂದು ಕ್ಷೇತ್ರದಲ್ಲೂ ಭಾಗಿಯಾಗಿರುವ ಗೃಹಲಕ್ಷ್ಮಿಯನ್ನು ಪತಿದೇವರು ಆಕಸ್ಮಿಕ ಮರಣಹೊಂದಿದ್ದಕ್ಕೆ ಆತನ ಶವದ ಜೊತೆಗೆ ಜೀವಂತವಾಗಿರುವ ಸತಿಯನ್ನು ಬಲವಂತವಾಗಿ ಹಗ್ಗದಿಂದ ಬಿಗಿದು ಚಿತೆಗೆ ತಳ್ಳಿ ಭಸ್ಮ ಮಾಡುವುದು ಮನುಷ್ಯರೋ ಅಥವಾ ಅಮಾನುಷರೋ ದೇವರಿಗೇ ಗೊತ್ತು. ಇಂತಹ ಇನ್ನೂ ಅನೇಕ ಸಾಮಾಜಿಕ ಪಿಡುಗುಗಳನ್ನು ತೊಲಗಿಸಲು ರಾಜಾರಾಮ್ ಮೋಹನ್‌ರಾಯ್‌ರವರು ಪಣತೊಟ್ಟು ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ಹೆಣ್ಣಿಗೆ ಶಿಕ್ಷಣ ಒಂದೇ ಮದ್ದು ಅಂದರೆ ಮಹಿಳೆಯರಿಗೆ ಶಿಕ್ಷಣವನ್ನು ಕೊಟ್ಟರೆ ಯಾವುದು ಬೇಕು ಯಾವುದು ಬೇಡವೆಂದು ನಿರ್ಧರಿಸುವ ಶಕ್ತಿ ಬರುತ್ತದೆ ಎಂದು ಯೋಚಿಸಿ ಬ್ರಹ್ಮ ಸಮಾಜದ ಸ್ಥಾಪನೆಗೆ ಮುಂದಾದರು.

## ಬ್ರಹ್ಮಸಮಾಜ–1828

ಇದರ ಉದ್ದೇಶ ಭಾರತ ದೇಶದಲ್ಲಿ ಬ್ರಹ್ಮೋಪಾಸನೆ, ಲಿಂಗಭೇದ ಮತ್ತು ಜಾತಿ–ಮತಗಳ ಭೇದವಿಲ್ಲದೆ ಸರ್ವರಿಗೂ ವೇದ ಉಪನಿಷತ್ತುಗಳ ಅಧ್ಯಯನಕ್ಕೆ ಅನುಕೂಲವಾಗುವಂತೆ ಸಮಾಜದ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಮುಖ್ಯ ಉದ್ದೇಶವಾಗಿತ್ತು.ಅದರಿಂದ 1828ನೇ ಆಗಸ್ಟ್ ತಿಂಗಳಲ್ಲಿ ಕಲ್ಕತ್ತದ ಚಿತ್‌ಪೂರ್‌ನಲ್ಲಿ ಸ್ಥಾಪಿಸಲಾಯಿತು.ರಾಜಾರಾಮ್ ಮೋಹನ್‌ರಾಯರ್‌ರವರು 'ಏಕದೇವತಾ ವಾದಿಗಳಿಗೊಂದು ಕೊಡುಗೆ' ಎಂಬ ಪರ್ಷಿಯನ್ ಗ್ರಂಥವನ್ನು ಬರೆದರು.ಇದು ಎಲ್ಲ ಮತಗಳ ವಿಗ್ರಹಾರಾಧನೆ ಹಾಗೂ ಮೂಢನಂಬಿಕೆಗಳನ್ನು ವಿರೋಧಿಸುವ ಮತ್ತು ಏಕದೇವತಾವಾದದ ಅನ್ವಯ ಸಾರ್ವತ್ರಿಕ ಧರ್ಮದ ಸಾಮಾನ್ಯ ಅಭಿಪ್ರಾಯವೊಂದನ್ನು ಸ್ಥಾಪಿಸಲು ಪ್ರಯತ್ನಿಸುವ ಗ್ರಂಥವಾಗಿದೆ."4

ಬ್ರಹ್ಮಸಮಾಜವು ಮುಖ್ಯವಾಗಿ ಏಕದೇವೋಪಾಸನೆಗೆ ಪ್ರಥಮತಃ ಪ್ರಾರಂಭವಾಗಿ ಕ್ರಮೇಣ ಅನೇಕ ಮುಖವಾಗಿ ದೇಶಕಲ್ಯಾಣದ ದೃಷ್ಟಿಯಿಂದ ಕಾರ್ಯಕ್ರಮವನ್ನು ಅನುಸರಿಸುತ್ತಾ ಬಂದಿದೆ.ಈ ಸಮಾಜ ಸ್ಥಾಪನೆಯಿಂದ ರಾಷ್ಟ್ರೀಯ ಭಾವನೆ ಉದ್ಭವಿಸಿ ಮತ ವಿಷಯಗಳಲ್ಲಿದ್ದ ಭಿನ್ನತೆ ದೂರವಾಗಿ ಸತ್ಯವನ್ನು ಸರ್ವರು ಸುಲಭವಾಗಿ ಸ್ವೀಕರಿಸಲು ಅನುಕೂಲತೆಯನ್ನುಂಟು ಮಾಡಿದ ಪ್ರಗತಿಪರ ಶಕ್ತಿಯೊಂದು ದೇವರಿಂದ ಆಶೀರ್ವದಿಸಲ್ಪಟ್ಟಿತ್ತು.

ಅಂದಿನ ಸಮಾಜದಲ್ಲಿ ಎಲ್ಲೆಲ್ಲೂ ಮೂಢನಂಬಿಕೆಗಳು ತಾಂಡವವಾಡುತ್ತಿದ್ದವು.ಧರ್ಮದ ಹೆಸರಿನಲ್ಲಿ ಅನೇಕ ಕ್ರೂರ ಅಪರಾಧಗಳು ಸಾಮಾನ್ಯವಾಗಿದ್ದವು.ಸತಿಸಹಗಮನ, ಬಾಲ್ಯವಿವಾಹ, ನರಬಲಿ, ಶಿಶುಬಲಿ ಇಂತಹ ಹಲವಾರು ಅಮಾನುಷ ಪದ್ಧತಿಗಳು ಆಚರಣೆಯಲ್ಲಿದ್ದು "ಪತಿಯು ಸತ್ತಾಗ

ಪತ್ನಿಯು ಪತಿಯ ಚಿತೆಯಲ್ಲಿ ಧುಮುಕಿ ಆತ್ಮಾರ್ಪಣೆ ಮಾಡಿಕೊಳ್ಳಬೇಕಾಗಿತ್ತು."5 ಇಂತಹ ಕ್ರೂರ ಪದ್ಧತಿಯನ್ನು ತೊಡೆದು ಹಾಕಲು ರಾಜಾರಾಮ್ ಮೋಹನ್‌ರಾಯ್‌ರವರು ಇಡೀ ತಮ್ಮ ಜೀವನವನ್ನು ಮುಡುಪಿಟ್ಟರು.19ನೇ ಶತಮಾನದಲ್ಲಿ "ಭಾರತದ ನವೋದಯದ ಧ್ರುವತಾರೆ" ಎಂದು ಕರೆದಿದ್ದಾರೆ.ಸಮಾಜದ ಸುಧಾರಣೆಯೇ ಅವರ ಪ್ರಮುಖ ಉದ್ದೇಶವಾಗಿತ್ತು.ಅದಕ್ಕಾಗಿಯೇ ಇವರನ್ನು "ಆಧುನಿಕ ಭಾರತದ ಶಿಲ್ಪಿ" ಎಂದು ಬಿರುದನ್ನು ಸಹ ಪಡೆದಿದ್ದರು.ದೇಶ ವಿದೇಶಗಳಲ್ಲಿ ಮನೆ ಮಾತಾದರು.ಇವರೆ ಮಹಾಪುರುಷರು.ರಾಜಾರಾಮ್ ಮೋಹನ್‌ರಾಯ್ ಪ್ರಪಂಚದ ವಿವಿಧ ಮತಗಳ ತುಲನಾತ್ಮಕ ಅಧ್ಯಯನ ಮುಖ್ಯವೆಂದು ತಿಳಿಸಿದರು. "ಏಕೇಶ್ವರವಾದ ಅಂದರೆ ದೇವರು ಒಬ್ಬನೇ ಎನ್ನುವ ತತ್ವವನ್ನು ಪ್ರತಿಪಾದಿಸಿ ಅಂದಿನ ಬಹುದೇವತಾರಾಧನ ಪದ್ಧತಿಗೆ ಕಡಿವಾಣ ಹಾಕಿದರು. ಹಲವು ಗ್ರಂಥಗಳನ್ನು ಬರೆದು ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದರು. ಸಾಮಾನ್ಯ ಜನರಿಗೂ ವೇದಾಂತವು ತಲುಪುವಂತೆ ಹೋರಾಡಿ ಶ್ರಮಿಸಿ ಮೇಲು ಕೀಳು ಎಂಬ ಭಾವನೆಯನ್ನು ತೊಡೆದು ಹಾಕಿದರು."6

ಸಹಗಮನವನ್ನು ಆಚರಿಸುವುದರಿಂದ ಸ್ವರ್ಗ ಭೋಗಗಳನ್ನು ಅನುಭವಿಸಬಹುದು ಎಂಬುದೊಂದು ಮೂಢನಂಬಿಕೆ.ಇದು ಮೋಕ್ಷ ಸಾಧನೆಗೆ ಸಾಧಕವಲ್ಲವೆಂಬುದನ್ನು ತಿಳದೋ ತಿಳದೂ ಸ್ತ್ರೀಯರನ್ನು ಅಗ್ನಿಯೊಳಕ್ಕೆ ಬಲತ್ಕಾರವಾಗಿ ತಳ್ಳಿ ದಹನ ಮಾಡುವುದು ಧರ್ಮವೇ?ಮಹಾಭಾರತ ಯುದ್ಧದಲ್ಲಿ ಲಕ್ಷಾಂತರ ಮಂದಿ ಯೋಧರು ಮಡಿದರೂ ಅವರ ಪತ್ನಿಯರು ತಮ್ಮ ಪತಿಗಳಿಗೆ ಧರ್ಮೋದಕಗಳನ್ನು ಕೊಟ್ಟರೇ ವಿನಾಃ ತಮ್ಮ ಪತಿಯೊಡನೆ ಚಿತೆಯೇರಿ ಭಸ್ಮವಾಗಲಿಲ್ಲ. ವೇದೋಪನಿಷತ್ತು ಸ್ಮೃತಿ–ಇವುಗಳಲ್ಲಿ ಎಲ್ಲಿಯೂ ಇಂತಹ ನೀಚ ಕೃತ್ಯಕ್ಕೆ ಆಧಾರವಿಲ್ಲವೆಂದು ರಾಜಾರಾಮ್ ಮೋಹನ್‌ರಾಯರು ಪ್ರತಿಪಾದಿಸುತ್ತಾರೆ.ಸ್ವಾರ್ಥಪರವಾದ ವೈದಿಕರು ಇಂದ್ರಜಾಲ, ಮಹೇಂದ್ರಜಾಲದಂತಹ ಎಷ್ಟೋ ಪವಾಡಗಳನ್ನು ಮಾಡಬಲ್ಲರು.ರಾಜಾರಾಮ್ ಮೋಹನ್‌ರಾಯರು ಎಲ್ಲರ ಮನ ಒಪ್ಪುವಂತೆ ಶಾಸ್ತ್ರಧಾರಿಗಳನ್ನು ಕೊಟ್ಟು ಮಾನವ ಸ್ವಭಾವಕ್ಕೆ ಅಸಹಜವಾದ ಸ್ತ್ರೀ ಹತ್ಯೆಯನ್ನು ನಿಲ್ಲಿಸಲು ಪಟ್ಟ ಪ್ರಯತ್ನ ಅಸ್ಟಿಷ್ಟಲ್ಲ.

ಬ್ರಹ್ಮಸಮಾಜದ ವಿರುದ್ಧವಾಗಿ ಧರ್ಮಸಭಾ ಎಂಬ ಸಂಘವನ್ನು ಸ್ಥಾಪಿಸಿದರು.ಬ್ರಹ್ಮಸಮಾಜವನ್ನು ಧ್ವಂಸ ಮಾಡುವುದಾಗಿಯೂ ಹೇಳುತ್ತಿದ್ದರು.ಸಹಗಮನದ ವಿಚಾರ ಬಂದಾಗ ರಾಜಾರಾಮ್ ಮೋಹನ್‌ರಾಯರೇ ಸ್ವಯಂ ಪ್ರೇಕ್ಷಕರ ವೃಂದದ ಸಮೂಹದಲ್ಲಿ ಹಾಜರಿದ್ದರು.

1833ನೇ ಜುಲೈ 11ನೇ ತಾರೀಕು ಕಟ್ಟಕಡೆಯ ತೀರ್ಮಾನ ರಾಜಾರಾಮ್ ಮೋಹನ್‌ರಾಯರ ಪರವಾಗಿಯೇ ಆಯಿತು.ಈ ತೀರ್ಪು ರಾಜಾರಾಮ್ ಮೋಹನರಾಯರಿಗೆ ಅದೆಷ್ಟು ಆನಂದವನ್ನುಂಟು ಮಾಡಿತೋ ಅದನ್ನು ವರ್ಣಿಸಲು ಅಸಾಧ್ಯ. ವಿರೋಧಪಕ್ಷದವರು ಈ ತೀರ್ಪಿನಿಂದ ಮುಖಭಂಗ ಅನುಭವಿಸುವಂತಾಯಿತು. ಇಡೀ ತಮ್ಮ ಜೀವನದಲ್ಲಿ ಎಷ್ಟೋ ಅಡತಡೆಗಳನ್ನು ಎದುರಿಸಿ ಪ್ರಯತ್ನಪಟ್ಟ

ಕಾರ್ಯ ತಮ್ಮ ಕಣ್ಮುಂದೆಯೇ ಯಶಸ್ವಿಯಾದುದನ್ನು ಕಾಣುವ ಸುಯೋಗ ರಾಜಾರಾಮ್ ಮೋಹನ್‌ರಾಯರಿಗೆ ಲಭಿಸಿತು.

**ಅಡಿಟಿಪ್ಪಣಿಗಳು**


1. ಕೆ. ಭೈರಪ್ಪ, ಭಾರತೀಯ ಸಮಾಜ, ಪ್ರಕಾಶ ಸಾಹಿತ್ಯ ಬೆಂಗಳೂರು, 1994, ಪುಟ. 500
2. ಅದೇ, ಪುಟ. 500
3. ಬಿ.ಆರ್. ಪ್ರಾಣೇಶರಾವ್, ರಾಜಾರಾಮ್ ಮೋಹನ್‌ರಾಯ್, ಭಾರತೀ ಪ್ರಕಾಶನ, ಮೈಸೂರು, 1978, ಪುಟ. 33.
4. ನವಭಾರತ ಪಿತ ರಾಜಾರಾಮ್ ಮೋಹನ್‌ರಾಯ್ ಜೀವನ ಚರಿತ್ರೆ, ಡಬ್ಲ್ಯು.ಹೆಚ್. ಹನುಮಂತಪ್ಪ, ಮುದ್ರಕರು, ಸಿ. ರಾಜಗೋಪಾಲಾಚಾರ್, ಮ್ಯಾನೇಜರ್ ಇಂಡಿಯನ್ ಪ್ರೆಸ್, ಬೆಂಗಳೂರು, 1968, ಪುಟ. 162.
5. ರಾಜಾರಾಮ್ ಮೋಹನ್‌ರಾಯ್, ಟಿ.ಟಿ. ಅಶ್ವತ್ಥನಾರಾಯಣ, ಪ್ರಕಾಶಕರು, ವಾಸನ್ ಪಬ್ಲಿಕೇಷನ್ಸ್, ಡಾ.ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು, 2010, ಪುಟ. 01.
6. ರಾಜಾರಾಮ್ ಮೋಹನ್‌ರಾಯ್ ಜೀವನ ಚರಿತ್ರೆ, ಮಧುಕೇಶ್, ಪ್ರಕಾಶಕರು ನಾಗಾರ್ಜುನ್ ಎಂಟರ್ ಪ್ರೈಸಸ್, ದಾವಣಗೆರೆ, 2001, ಪುಟ. 2.